


### ಸಮಾಜದ ಮನೋಭಾವ ಬದಲಾಗಲಿ

'ಯಶಸ್ಸಿನ ಎದುರು ಮಹಿಳೆ ಒಂಟಿಯೇ?' (ನ. 09, ಡಾ. ಪ್ರೇಮಲತ ಬಿ.) ಮುಖಪುಟ ಲೇಖನ ಸವಿಸ್ತಾರವಾಗಿದೆ. ಲೇಖಕಿ ಯಶಸ್ವಿ ಮಹಿಳೆಯ ಸಮಸ್ಯೆಗಳ ಕುರಿತು ಸಮಗ್ರ ಚಿತ್ರಣ ನೀಡಿದ್ದಾರೆ. ಯಶಸ್ವಿಯಾದ ಪುರುಷರು ವೃತ್ತಿಯಲ್ಲಿ, ವೈಯಕ್ತಿಕವಾಗಿ, ಕುಟುಂಬದಲ್ಲಿ, ಸಮಾಜದಲ್ಲಿ ಎಲ್ಲರಿಂದಲೂ ಗೌರವ ಪಡೆಯುತ್ತಾರೆ. ಆದರೆ ಮಹಿಳೆ ಯಶಸ್ಸಿನ ಏಣಿ ಏರಿದರೆ ಸಾಕು ಗಂಡಂದಿರಿಂದ, ಸಮಾಜದಿಂದ, ಕುಟುಂಬದಿಂದ ಎಲ್ಲರಿಂದಲೂ ತೊಂದರೆ ಅನುಭವಿಸುತ್ತಾರೆ. ಈ ಲೇಖನ ಮಹಿಳೆಯರ ಬದುಕಿನ ಕುರಿತ ಎಲ್ಲಾ ಆಯಾಮಗಳನ್ನು ತೋರಿದೆ. ಮಹಿಳೆ ಯಶಸ್ಸು ಗಳಿಸಲು ಹೋಗಿ ಒಂಟಿಯಾಗುತ್ತಿರುವುದು ನಿಜ. ಈ ವಿಷಯದಲ್ಲಿ ಸಮಾಜದ ಮನೋಭಾವ ಬದಲಾಗಬೇಕಿದೆ.

—ಸುಜಾತ ಆರ್., ತುಮಕೂರು

### ಸಾಮಾನ್ಯೀಕರಣ ಬೇಡ

ಲೇಖನ ಪೂರ್ವಗ್ರಹಪೀಡಿತದಂತೆ ಕಂಡಿತು. ತಮ್ಮ ಹೆಂಡತಿಯ ಸಾಧನೆ ಬಗೆಗೆ ಹೆಮ್ಮೆಪಡುವ ಗಂಡಂದಿರು ಬೇಕಾದಷ್ಟಿದ್ದಾರೆ. ಹಾಗೆಯೇ ತಮ್ಮ ಸಾಧನೆಯಿಂದ ಎಲ್ಲ ಮರೆತವರಂತೆ ಆಡುವ ಮಹಿಳೆಯರೂ ಸಾಕಷ್ಟಿದ್ದಾರೆ. ಜಗತ್ತಿನ ಎಲ್ಲ ಗಂಡಸರೂ ಕುತ್ಸಿತ ಮನೋಭಾವದವರು, ಸಾಧಕ ಹೆಂಡತಿಯರ ಬಗ್ಗೆ ಕರುಬುವವರು ಎಂಬುದು ಖಂಡಿತ ಒಪ್ಪುವಂಥದ್ದಲ್ಲ. ಈ ವಿಷಯದ ಸಾಮಾನ್ಯೀಕರಣ ಸರಿಯಲ್ಲ ಎನ್ನಿಸಿತು.

—ಮುರಳೀಧರ್ ಕುಮಾರ್

### ಕಿವಿಗೊಡುವವರು ಯಾರು?

'ಅನ್ನ ವಿಷವಾದೊಡೆ ಯಾರ ದೂರುವುದು...' (ನ. 09, ರಘುನಾಥ ಚ.ಹ.) 'ನಿಮ್ಮೊಡನೆ', ಜಾಗೃತಿ ಮೂಡಿಸುವ ಬಹು ಕಾಳಜಿಯ ಲೇಖನ. ಆದರೆ ಇದಕ್ಕೆಲ್ಲ ಕಿವಿಗೊಡುವವರು ಯಾರು? ಕಿವಿಯಿದ್ದ ಕಿವುಡರ ಮುಂದೆ ಕಿನ್ನರಿ ನುಡಿಸಿದಂತೆ.

—ರಾಜಶೇಖರ ಕುಕ್ಕುಂದಾ, ಬಾಗಲಕೋಟೆ

### ಅಕ್ಷರ ನಮನ

'ಬೇಡಿ; ತತ್ತ್ವ ಸತ್ವದ ನಿಷ್ಠುರವಾದಿ' (ನ. 09, ವಿಶಾಖ ಎನ್.) ಉತ್ತಮ ನುಡಿನಮನವಾಗಿದೆ. ಈಚೆಗೆ ಮರಣ ಹೊಂದಿದ ದಂತಕತೆ ಸ್ಪಿನ್ನರ್ ಬಿಷನ್ ಸಿಂಗ್ ಬೇಡಿಯವರ ನಿಧನದಿಂದ ಭಾರತದ ಕ್ರಿಕೆಟಿಗೆ ತುಂಬಲಾರದ ನಷ್ಟ ಉಂಟಾಗಿದೆ. ಅವರೊಬ್ಬ ಶ್ರೇಷ್ಠ ಮಾನವರಾಗಿದ್ದರು. ಆಗಿನ ಕಾಲದಲ್ಲಿ ಕ್ರಿಕೆಟಿಗರಿಗೆ ಹೆಚ್ಚುವರಿ ಸಂಭಾವನೆ ದೊರೆಯುತ್ತಿರಲಿಲ್ಲ. ಆಡಳಿತದ ವಿರುದ್ಧ ಆಟಗಾರರಿಗಾಗಿ ಉತ್ತಮ ಸೌಕರ್ಯ ಹಾಗೂ ಸಂಭಾವನೆಗೆ ಹೋರಾಡಿದವರು. ಅವರು ಅಗಲಿದ ಈ ಸಂದರ್ಭ ಅವರನ್ನು ಅಕ್ಷರದ ಮೂಲಕ ನೆನೆದದ್ದು ಸಾರ್ಥಕವಾಯಿತು.

—ಎ.ಮು. ಖಾನ್, ಬೆಂಗಳೂರು

### 'ಇಜ್ಜೋಡಿನ' ಸರಮಾಲೆ

'ಇಜ್ಜೋಡು' (ನ. 02, ರಾಜಕುಮಾರ ಕುಲಕರ್ಣಿ) ಕಥೆ ಚೆನ್ನಾಗಿದೆ. ಕಥೆಯಲ್ಲಿ ಪ್ರೊ. ಬದರಿನಾಥ್ ಅವರ ಎರಡನೇ ಮದುವೆ ಮಾತ್ರ ಇಜ್ಜೋಡು ಅಲ್ಲ, ಇವರ ಮೊದಲನೇ ಮದುವೆ ಕೂಡ ಇಜ್ಜೋಡು ಆಗಿತ್ತು ಎನ್ನುವುದು ಗಮನಾರ್ಹ.

ಒಂದು ನೋವಿನಿಂದ ದೂರವಾಗಲು ಮತ್ತೊಂದು ಮದುವೆ ಆಗಿ ನೋವನ್ನು ತಂದುಕೊಂಡ ಬದರಿನಾಥರ ಜೀವನ ಕೊನೆಯಲ್ಲಿ ಆತ್ಮಹತ್ಯೆಯ ರೂಪದಲ್ಲಿ ಅಂತ್ಯ ಕಂಡಿದ್ದು ನಿಜಕ್ಕೂ ನೋವಾಯಿತು. ಬೌದ್ಧಿಕವಾಗಿ ಸಾಂಗತ್ಯ ಬಯಸುವುದು ತಪ್ಪಲ್ಲ. ಆದರೆ ಅದು ಇಜ್ಜೋಡು ಆಗಬಾರದು ಎನ್ನುವ ಕಥೆಗಾರನ ಕಳಕಳಿ ಹಿಡಿಸಿತು.

—ಜಯಪ್ರಕಾಶ್ ಚಿ. ನಾಗತಾಣ, ಬಾಗಲಕೋಟೆ

### ಸಾಹಿತ್ಯದ ಕೊಡುಗೆ

'ಕನ್ನಡ ಸಾಹಿತ್ಯ ವಸಂತ; ಇದು ಬಿ.ಇ. ಹಾಗೂ ವೈದ್ಯಕೀಯ ಪದವೀಧರರ ಕಾಲವೆ?' (ನ. 09, ಕೆ.ಎನ್. ಗಣೇಶಯ್ಯ ಮತ್ತು ಎ.ಎಸ್. ಹರೀಶ) ಎಂಬುದಕ್ಕೆ ಬಿ.ಇ., ಎಂ.ಇ. ಮತ್ತು ಅಮೆರಿಕದಲ್ಲಿ ಎಂ.ಎಸ್. ಪದವಿಗಳನ್ನು ಪಡೆದ ನಾನು, ಸಾಹಿತ್ಯಕ್ಕೆ ನನ್ನ ಕೊಡುಗೆ ಏನೆಂಬುದನ್ನು ಹಂಚಿಕೊಳ್ಳುತ್ತೇನೆ. ನಾನು ಹನ್ನೊಂದು ವರ್ಷದವನಾಗಿದ್ದಾಗಲೇ (1955ರಲ್ಲಿ) ಕೆಲವು ದಿನಪತ್ರಿಕೆಗಳಲ್ಲಿ ನನ್ನ ಚುಟುಕುಗಳು ಮತ್ತು ಬರಹಗಳು ಪ್ರಕಟಗೊಂಡಿದ್ದವು. ಎಂಬತ್ತು ವರ್ಷದ ನಾನು ಈಗಲೂ ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುತ್ತಿರುತ್ತೇನೆ.

—ಪ್ರೊ. ಎಸ್.ಆರ್. ದೇವಪ್ರಕಾಶ್, ತುಮಕೂರು

### ವಿಶಿಷ್ಟ ಸಾಹಿತ್ಯ ಪ್ರಕಾರ ಗುರುತಾಗಲಿ



ಕನ್ನಡ ಸಾಹಿತ್ಯ ವಸಂತ ಲೇಖನ, ಸಾಹಿತ್ಯ ಅಧ್ಯಯನ ಬರವಣಿಗೆಯ ಪ್ರಗತಿ ಹಾಗೂ ಅದರಲ್ಲಿ ತೊಡಗಿಸಿಕೊಂಡವರ ಸಂಖ್ಯಾಮಿತಿ ಮೇಲೆ ಅವಲೋಕನ ನಡೆಸಿದೆ.

ಎಲ್ಲಾ ಸಾಹಿತ್ಯ ಪ್ರಕಾರಗಳಲ್ಲೂ ಸಾಹಿತ್ಯೇತರ ಅಧ್ಯಯನ ನಡೆಸಿದ ಲೇಖಕರು ಕಾಣಿಸುತ್ತಿರುವುದು ಸಾಹಿತ್ಯ ಕ್ಷೇತ್ರದಲ್ಲಿ ಧನಾತ್ಮಕ ಚಿಹ್ನೆಯ ಪ್ರತಿಬಿಂಬದಂತೆ ತೋರಿದರೂ ಅವರಲ್ಲಿ ಇರಬಹುದಾದ ಸಾಹಿತ್ಯದ ಕುರಿತ ಆಸ್ಥೆ, ಸೃಜನಶೀಲತೆಯ ಮಾನದಂಡವಾಗಬಹುದೇ ಅಥವಾ ಕಾರ್ಯಕ್ಷೇತ್ರ ಸಂಬಂಧಿ ಒತ್ತಡಗಳಿಗೆ ಪರಿಹಾರವಾಗಿ ಒದಗಿ ಬರಬಹುದೇ ಎಂಬ ಪ್ರಶ್ನೆ ಕಾಡಬಹುದು. ಪ್ರಸ್ತುತ ಶಿಕ್ಷಣಪದ್ಧತಿ–ವಿಜ್ಞಾನ, ತಂತ್ರಜ್ಞಾನ, ಸಾಹಿತ್ಯ ಹೀಗೆ ವೈವಿಧ್ಯಮಯ ಶಾಖೆಗಳು ಹಾಗೂ ವಿದ್ಯಾರ್ಥಿಗಳ ಸೃಜನಶೀಲತೆ ಪರಸ್ಪರ ಅಸಂಗತ ಎನ್ನುವ ಚಿಂತನೆ ಮುನ್ನೆಲೆಗೆ ಬರುತ್ತಿರುವುದಕ್ಕೆ, ಸಾಹಿತ್ಯ ವಿದ್ಯಾರ್ಥಿಗಳಲ್ಲಿಯೇ ಕಾಡುವ ಬರವಣಿಗೆಯ ಬಡತನ, ಸಾಹಿತ್ಯದ ಗಂಧಗಾಳಿಯೇ ಇರದವನಲ್ಲೂ ಪ್ರಚ್ಛನ್ನವಾಗಿ ಇರಬಹುದಾದ ಸೃಜನಶೀಲತೆಯ ಹರಿವು ಈ ಪರಸ್ಪರ ವಿರೋಧಾಭಾಸಗಳು ಕಾರಣ ಆಗಿರಬಹುದು.

ಸಾಹಿತ್ಯ ವಲಯಗಳಲ್ಲಿ ಆಗುತ್ತಿರುವ ಪ್ರಗತಿಯು ಬರಹಗಾರರ ಸಂಖ್ಯಾವಾರು ಪ್ರಮಾಣಗಳ ಮೇಲೆ ವಿಶ್ಲೇಷಣೆಗೊಳಪಡದೆ ವೈವಿಧ್ಯಮಯ, ವಿಶಿಷ್ಟ ಸಾಹಿತ್ಯ ಪ್ರಕಾರಗಳಿಂದ ಗುರುತಿಸಲ್ಪಡುವಂತಾದಾಗ ಸಾಹಿತ್ಯದಲ್ಲೂ ಸಮಾನತೆಯ ಭಾವ ಸಾಧಿಸಿದಂತಾಗಬಹುದು.

— ಎಚ್. ಸಿದ್ದಾರ್ಥ, ಉಡುಪಿ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in